

## ‘ನಮ್ಮದು ಮನೋವಿಕಾಸ ಕೇಂದ್ರ’

ನಮ್ಮದು ಬರೀ ಗ್ರಂಥಾಲಯವಲ್ಲ; ಅರಿವಿನ ಕೇಂದ್ರ. ಮಕ್ಕಳ ಮನೋವಿಕಾಸದ ತಾಣ.

ಮಗು–ತಾಯಿ ಇಬ್ಬರೂ ಪುಸ್ತಕ ಓದಬೇಕು ಎಂಬ ಪರಿಕಲ್ಪನೆಯಡಿ ‘ಅಮ್ಮನಿಗೊಂದು ಪುಸ್ತಕ’ ಯೋಜನೆ ಆರಂಭಿಸಿದೆ. ತಾಯಿ ತನ್ನ ಮಗುವಿಗೆ ಬೇರೆಯವರಿಗಿಂತ ಉತ್ತಮ ರೀತಿಯಲ್ಲಿ ಅರ್ಥಮಾಡಿಸಲು ಸಾಧ್ಯವಾಗುತ್ತದೆ. ತಾಯಿ–ಮಗು ಪುಸ್ತಕ ಓದಿದರೆ ಅದರ ಜ್ಞಾನ ಮನೆಯವರಿಗೆಲ್ಲ ತಲುಪುತ್ತದೆ.

ಶಾಲಾ ಸಮಯದ ನಂತರ ಮಕ್ಕಳು ಗ್ರಂಥಾಲಯಕ್ಕೆ ಭೇಟಿ ನೀಡುತ್ತಾರೆ. ಮಕ್ಕಳ ಜೊತೆಗೆ, ತಾಯಂದಿರು ಸಹ ಬರುತ್ತಿದ್ದಾರೆ. ರಜಾದಿನಗಳಲ್ಲಿಯೂ ನಮ್ಮ ಗ್ರಂಥಾಲಯ ಮಕ್ಕಳಿಂದ ತುಂಬಿರುತ್ತದೆ. ಅವರನ್ನು ಹಾಡುಗಾರಿಕೆ, ನೃತ್ಯ, ಆಟ, ಕರಕುಶಲ ವಸ್ತು ತಯಾರಿಕೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಂವಹನ, ನಾಟಕ, ಕಥೆ ಹೇಳುವುದು ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿಸುತ್ತೇವೆ.

ಮಕ್ಕಳು ಗ್ರಂಥಾಲಯದ ಸಂಪರ್ಕಕ್ಕೆ ಬಂದ ನಂತರ, ಮನೆಯಲ್ಲಿ ಮೊಬೈಲ್ ಫೋನ್‌ಗಳ ಬಳಕೆ ಕಡಿಮೆಯಾಗಿದೆ. ಓದಿನ ಹವ್ಯಾಸ ಬೆಳೆದಿದೆ. ವೇದಿಕೆಯ ಭಯ ನಿವಾರಣೆಯಾಗಿದೆ. ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ಅವರ ಪ್ರಗತಿ ಹೆಚ್ಚಿದೆ.

ನಾನು ಇಲ್ಲಿಗೆ ವರ್ಗವಾಗಿ ಬಂದಾಗ ಗ್ರಾಮ ಪಂಚಾಯಿತಿಯ ಸಭಾಂಗಣದಲ್ಲಿ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿತ್ತು. 6 ಸೆಂಟ್ಸ್ ಜಾಗದಲ್ಲಿ ಸುಮಾರು 16 ಲಕ್ಷ ವೆಚ್ಚದಲ್ಲಿ ಕಟ್ಟಡ ನಿರ್ಮಾಣವಾಗಿದೆ. ಕಂಪ್ಯೂಟರ್, ಲ್ಯಾಪ್‌ಟಾಪ್, ಇಂಟರ್‌ನೆಟ್ ಸಂಪರ್ಕ ಇದೆ.

ಗ್ರಾಮದ ಎಲ್ಲರಿಗೂ ಸ್ಥಳೀಯ ವಿಚಾರ, ಸರ್ಕಾರದ ಯೋಜನೆಗಳು ತಿಳಿದಿರಬೇಕು, ಅದಕ್ಕಾಗಿ ಸ್ಥಳೀಯ ಕಾರ್ಯಕ್ರಮಗಳನ್ನು ಮಾಡಬೇಕು ಎಂಬುದು ಇಲಾಖೆಯ ಆಶಯ. ಹೀಗಾಗಿ ಗ್ರಂಥಾಲಯಗಳನ್ನು ಸರ್ಕಾರ ಮಾಹಿತಿ ಕೇಂದ್ರವಾಗಿ ಪರಿವರ್ತಿಸಿದೆ. ಈಗ ಅರಿವು ಕೇಂದ್ರವಾಗಿ ಕೆಲಸ ಮಾಡುತ್ತಿದೆ.

ವಾಟ್ಸ್‌ಆ್ಯಪ್ ಬ್ರಾಡ್‌ಕಾಸ್ಟ್ ಗ್ರೂಪ್ ಮಾಡಿಕೊಂಡಿದ್ದೇನೆ. ಅದರ ಮೂಲಕ 4 ಸಾವಿರ ಜನರನ್ನು ತಲುಪುತ್ತೇನೆ. ಯಾವ ಕಾರ್ಯಕ್ರಮ ಮಾಡಿದರೂ ಸ್ಥಳೀಯರು, ಪಾಲಕರು, ದಾನಿಗಳು ನೆರವಿಗೆ ಬರುತ್ತಾರೆ. ಊಟ– ಉಪಾಹಾರದ ವ್ಯವಸ್ಥೆ ಮಾಡುತ್ತಾರೆ. ಪಾರದರ್ಶಕ ವ್ಯವಸ್ಥೆ ಇದೆ. ನಿತ್ಯ ನಮ್ಮ ಗ್ರಂಥಾಲಯಕ್ಕೆ ಸರಾಸರಿ 50 ಮಕ್ಕಳು ಬರುತ್ತಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪಂಚಾಯಿತಿ ಆಡಳಿತ ಮಂಡಳಿ, ಸಿಬ್ಬಂದಿ ವರ್ಗದ ಬೆಂಬಲ, ಇಡೀ ಊರ ಜನರ ಸಹಕಾರದಿಂದ ಇದೆಲ್ಲ ಸಾಧ್ಯವಾಗಿದೆ.

ನಾನು ಬಂದಾಗ ಸಾವಿರ ಪುಸ್ತಕ ಇದ್ದವು. ಈಗ 8322 ಪುಸ್ತಕ ಇವೆ. ದಾನಿಗಳ ಕೊಡುಗೆಯೇ ಹೆಚ್ಚು. ದಾನಿಯೊಬ್ಬರು ‘ಅಲೆಕ್ಸಾ’ ನೀಡಿದ್ದಾರೆ. ನಮ್ಮ ಗ್ರಂಥಾಲಯದಲ್ಲಿ ಅಲೆಕ್ಸಾ ನೋಡಿ ರಾಜ್ಯ ಸರ್ಕಾರ ಸುಮಾರು 300 ಗ್ರಾಪಂಗಳಿಗೆ ಈ ಸೌಲಭ್ಯ ಕಲ್ಪಿಸಿದೆ.

**–ಸಾವಿತ್ರಿ ರಾಮ್ ಕಣೆಮರಡ್ಕ,**
ಮೇಲ್ವಿಚಾರಕಿ, ಮಂಡೆಕೋಲು ಗ್ರಾಮ ಪಂಚಾಯಿತಿ
ಗ್ರಂಥಾಲಯ ಮತ್ತು ಅರಿವು ಕೇಂದ್ರ



ಮಗುವಿಗೆ ಅದನ್ನು ಮನನ ಮಾಡಿಸಬೇಕು. ಇದು ಈ ಯೋಜನೆಯ ಪರಿಕಲ್ಪನೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ 10 ಶಾಲೆಗಳು, 9 ಅಂಗನವಾಡಿಗಳಿಗೆ ಭೇಟಿ ನೀಡಿ ಗ್ರಂಥಾಲಯದ ಬಗ್ಗೆ ಜಾಗೃತಿ ಮೂಡಿಸಿ, ಓದುವ ಹವ್ಯಾಸ ಬೆಳೆಸಲು ಯತ್ನಿಸಿದರು. ಸರ್ಕಾರದ ಓದುವ ಬೆಳಕು ಯೋಜನೆಯಡಿ ಪ್ರತಿ ಶಾಲೆಯ ಮಕ್ಕಳನ್ನು ಶುಲ್ಕ ರಹಿತವಾಗಿ ಗ್ರಂಥಾಲಯದ ಸದಸ್ಯರನ್ನಾಗಿ ನೋಂದಣಿ ಮಾಡಿಸಿದರು (6ರಿಂದ 18 ವರ್ಷದ ಮಕ್ಕಳಿಗೆ ಗ್ರಂಥಾಲಯ ಶುಲ್ಕ ಇಲ್ಲ). ಮಕ್ಕಳಲ್ಲಿ ಆಸಕ್ತಿ ಮೂಡಿಸುವ, ಅವರ ಜ್ಞಾನ ವೃದ್ಧಿಗೆ ಪೂರಕವಾಗುವ ಪುಸ್ತಕಗಳನ್ನು ಕೊಡಲಾರಂಭಿಸಿದರು. ಮಕ್ಕಳು ಅಷ್ಟೇ ಅಲ್ಲ ತಾಯಂದಿರಲ್ಲೂ ಇದು ಓದಿನ ಹಸಿವು ಹೆಚ್ಚಿಸಿತು. ಮಗುವಿನ ಜೊತೆ– ತಾಯಿ, ಆ ಮೂಲಕ ಸಮಾಜವೇ ಗ್ರಂಥಾಲಯದತ್ತ ಮುಖಮಾಡಿತು. ಒಂದು ಮಗು ತನ್ನ ಹುಟ್ಟುಹಬ್ಬದ ಅಂಗವಾಗಿ ಗ್ರಂಥಾಲಯಕ್ಕೆ ಪುಸ್ತಕ ದೇಣಿಗೆ ನೀಡಿತು. ಅದನ್ನು ತಿಳಿದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಯುಕ್ತರಾಗಿದ್ದ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಅವರು ಆ



ಹುಲಿ ವೇಷದಲ್ಲಿ ಮಂಡೆಕೋಲು ಗ್ರಾಮ ಪಂಚಾಯಿತಿ ಗ್ರಂಥಾಲಯದ ಮಕ್ಕಳು